**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.

---

ಸಂಖ್ಯೆ: ತಾಂ.ಪ.ಭೂ.ಘಟಕ.65/08-09 ದಿನಾಂಕ:24.11.2008.

**ಸುತ್ತೋಲೆ**

ವಿಷಯ: ಮ್ಯುಟೇಷನ್ ಪೂರ್ವ ನಕ್ಷೆ ತಯಾರಿಸಲು ನೋಟೀಸ್ ಜಾರಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳು.

***

ಭೂವ್ಯಾಜ್ಯಗಳನ್ನು ಮುಂಬರುವ ದಿನಗಳಲ್ಲಿ ತಡೆಗಟ್ಟುವ ಮಹತ್ತರವಾದ ಧ್ಯೇಯವನ್ನು ಇಲಾಖೆಯು ಹೊಂದಿದ್ದು, ಇದಕ್ಕೆ ಪೂರಕವಾಗಿ 11ಇ ಸ್ಕೆಚ್ ತಯಾರಿಕೆ, ಸಂಯೋಜಿತ ಮ್ಯುಟೇಷನ್ ಪೋಡಿ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದಿರುತ್ತದೆ. ಈ ಯೋಜನೆಗಳ ಪ್ರಮುಖ ಉದ್ದೇಶವು ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ಸಿದ್ಧಪಡಿಸುವ ಹಂತದಲ್ಲಿಯೇ ಸರ್ವೆ ನಂಬರಿನಲ್ಲಿ ಹಿತಾಸಕ್ತಿಯುಳ್ಳವರೆಲ್ಲರಿಗೂ ಮುಂಚಿತವಾಗಿ ನೋಟೀಸ್ ಜಾರಿ ಮಾಡಿ, ಎಲ್ಲರ ಸಮಕ್ಷಮ ಅಳತೆ ಮಾಡಿ, ಎಲ್ಲಾ ಹಕ್ಕುದಾರರಿಗೂ ಪ್ರತ್ಯೇಕ ಗಡಿ ನಿರ್ಧರಿಸಿ ಹಕ್ಕು ದಾಖಲೆಗಳನ್ನು ತಯಾರಿಸಿ ನಕ್ಷೆಗಳನ್ನು ವಿತರಿಸುವುದಾಗಿದೆ. ಆದ್ದರಿಂದ ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ತಯಾರಿಸುವ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಎಲ್ಲಾ ಆರ್.ಟಿ.ಸಿ.ದಾರರಿಗೆ ನೋಟೀಸ್ ಜಾರಿ ಮಾಡುವುದು ಮುಖ್ಯ ಕೆಲಸವಾಗಿದೆ.

**ನೋಟೀಸ್ ಜಾರಿ ಮಾಡುವ ಸಮಯದಲ್ಲಿ ಅನುಸರಿಸಬೇಕಾದ ವಿಧಾನ:-**

1) ಆರ್.ಟಿ.ಸಿ.ಯ ಕಾಲಂ ನಂ.9 ರಲ್ಲಿ ನಮೂದಾಗಿರುವ ಎಲ್ಲಾ ಹಕ್ಕುದಾರರಿಗೂ ಅವರ ಹಕ್ಕುಗಳಿಗೆ ಅನುಸಾರವಾಗಿ ಅಳತೆ ಮಾಡಬೇಕಾಗಿದ್ದು, ಎಲ್ಲರಿಗೂ ನೋಟೀಸ್ ಜಾರಿ ಮಾಡುವುದು.

2) ಎಲ್ಲಾ ಆರ್.ಟಿ.ಸಿ.ದಾರರ ವಿಳಾಸ ವಿವರಗಳನ್ನು 11ಇ ನಕ್ಷೆ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರಿಂದ ಸಾಧ್ಯವಾದಷ್ಟು ಅರ್ಜಿ ಸಲ್ಲಿಸುವ ಸಮಯದಲ್ಲಿಯೇ ಪಡೆಯುವುದು.

3) ಆರ್.ಟಿ.ಸಿ.ದಾರರು ಗ್ರಾಮದಲ್ಲಿಯೇ ವಾಸವಾಗಿದ್ದಲ್ಲಿ ಖುದ್ದಾಗಿ ನೋಟೀಸ್ ಜಾರಿ ಮಾಡುವುದು. ನೋಟೀಸ್ ಜಾರಿ ಮಾಡಿದ ವಿಧಾನದ ಬಗ್ಗೆ ಮಹಜರ್‌ನಲ್ಲಿ ವಿವರವಾಗಿ ದಾಖಲೆ ಮಾಡುವುದು. ಆರ್.ಟಿ.ಸಿ.ದಾರರು ಬೇರೆ ಸ್ಥಳದಲ್ಲಿ ವಾಸವಾಗಿದ್ದಲ್ಲಿ ಅಂಚೆಯ ಮೂಲಕ(ಸಿ.ಓ.ಪಿ.) ಅಳತೆ ದಿನಾಂಕವನ್ನು ತಪ್ಪದೇ ತಿಳಿಯಪಡಿಸುವುದು.

4) ಎಲ್ಲಾ ಆರ್.ಟಿ.ಸಿ.ದಾರರು ಅಳತೆ ವೇಳೆಯಲ್ಲಿ ಹಾಜರಿರುವಂತೆ ಅವಶ್ಯವಾದ ಎಲ್ಲಾ ಕ್ರಮ ಜರುಗಿಸುವುದು. ಕೈಗೊಂಡ ಕ್ರಮಗಳ ಬಗ್ಗೆ ಮಹಜರ್‌ನಲ್ಲಿ ಸ್ಪಷ್ಟವಾಗಿ ನಮೂದಿಸುವುದು.

SSLR-circular
G

ನೋಟೀಸ್ ಜಾರಿ ಮಾಡಲಾಗಿಯೂ ಆರ್.ಟಿ.ಸಿದಾರರ ಪೈಕಿ ಯಾರಾದರೂ ಅಳತೆ ವೇಳೆಯಲ್ಲಿ ಗೈರುಹಾಜರಾಗಿದ್ದರೂ ಸಹ ಅಳತೆ ಕೆಲಸ ಮುಂದುವರೆಸುವುದು. ಎಲ್ಲಾ ಆರ್.ಟಿ.ಸಿ.ದಾರರು ಹಾಜರಿಲ್ಲವೆಂದು ಅಳತೆ ನಿಲ್ಲಿಸುವ ಅಗತ್ಯವಿಲ್ಲ. ಅಳತೆ ಮಾಡುವ ಸಮಯದಲ್ಲಿ ಹಾಜರಾಗುವ ಹಕ್ಕುದಾರರು ಅಥವಾ ಗ್ರಾಮಸ್ಥರ ಸಮ್ಮುಖದಲ್ಲಿ ಅಳತೆ ಮಾಡಿ ಮಹಜರ್‌ನಲ್ಲಿ ನೋಟೀಸ್ ಪಡೆದು ಹಾಜರಾದವರ, ಹಾಜರಾಗದವರ, ನೋಟೀಸು ಪಡೆಯದೆ ಗೈರು ಹಾಜರಾದವರ ಬಗ್ಗೆಯೂ ನಮೂದಿಸುವುದು.

5) ಅಳತೆ ಸಮಯದಲ್ಲಿ ಆರ್.ಟಿ.ಸಿ. ಯ ಎಲ್ಲಾ ಹಕ್ಕುದಾರರ ಪೈಕಿ ಒಬ್ಬರ ಕೋರಿಕೆ ಇದ್ದರೂ ಸಹ ಆರ್.ಟಿ.ಸಿ.ದಾರರು ಹಾಜರಿದ್ದು, ತಮ್ಮ ಅನುಭವ ತೋರಿಸಿ ತಂಟೆತಕರಾರು ಇಲ್ಲದಿದ್ದಲ್ಲಿ ಅವರ ಹಕ್ಕಿನ ವಿಸ್ತೀರ್ಣಕ್ಕೂ ಹಿಸ್ಸೆ ವಿಂಗಡಿಸಿ ಅಳತೆ ದಾಖಲಿಸಿ ಬ್ಲಾಕ್ ನಂಬರ್ ನೀಡುವುದು.

6) ಸರ್ವೆ ನಂಬರಿನ ಬಾಜು ಸರ್ವೆ ನಂಬರುಗಳ ಹಿಡುವಳಿದಾರರಿಗೆ ನೋಟೀಸು ಜಾರಿ ಮಾಡುವ ಅವಶ್ಯಕತೆ ಇರುವುದಿಲ್ಲ ಹಾಗೂ ಅವರ ಆಕ್ಷೇಪಣೆಗಳನ್ನು 11ಇ ನಕ್ಷೆ ತಯಾರಿಸುವ ಸಮಯದಲ್ಲಿ ಪರಿಗಣಿಸುವ ಅವಶ್ಯಕತೆ ಇರುವುದಿಲ್ಲ.

ಈ ಕ್ರಮಗಳನ್ನು ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ತಯಾರಿಸುವಾಗ ಕಡ್ಡಾಯವಾಗಿ ಅನುಸರಿಸಲು ಎಲ್ಲಾ ಪರವಾನಗಿ ಭೂಮಾಪಕರಿಗೆ ಸೂಚನೆ ನೀಡುವುದು ತಹಸೀಲ್ದಾರ್ ಮತ್ತು ಪರ್ಯಾವೇಕ್ಷಕರ ಜವಾಬ್ದಾರಿಯಾಗಿರುತ್ತದೆ ಹಾಗೂ ಭೂದಾಖಲೆಗಳ ಉಪ ನಿರ್ದೇಶಕರು ನೋಟೀಸ್ ಜಾರಿ ಪ್ರಕ್ರಿಯೆಯಲ್ಲಿ ಮೇಲೆ ತಿಳಿಸಿರುವ ಕ್ರಮಗಳನ್ನು ಅನುಸರಿಸುತ್ತಿರುವ ಬಗ್ಗೆ ಪರಿಶೀಲಿಸಿ ವರದಿ ನೀಡುವುದು.

(ಸಹಿ)
ಆಯುಕ್ತರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು,ಬೆಂಗಳೂರು.

<u>ಪ್ರತಿಯನ್ನು:-</u>

1) ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ.
2) ಎಲ್ಲಾ ಪ್ರಾದೇಶಿಕ ಆಯುಕ್ತರಿಗೆ.
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ.
4) ಭೂದಾಖಲೆಗಳ ಜಂಟಿ ನಿರ್ದೇಶಕರು (ತಾಂ) : (ವಿ ಮತ್ತು ತ) ಬೆಂಗಳೂರು ರವರಿಗೆ.
5) ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರವರಿಗೆ ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕಾಗಿ.
6) ಪಿ.ಎಂ.ಯು.ಘಟಕಕ್ಕೆ.
7) ಭೂದಾಖಲೆಗಳ ಉಪ ನಿರ್ದೇಶಕರು (ಆ) ರವರಿಗೆ.
8) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಅನುಪಾಲನೆಗಾಗಿ.
9) ಎಲ್ಲಾ ತಹಶೀಲ್ದಾರ್‌ರವರುಗಳಿಗೆ ಮಾಹಿತಿ ಹಾಗೂ ಅನುಪಾಲನೆಗಾಗಿ.
10) ಭೂದಾಖಲೆಗಳ ಸಹಾಯಕ ನಿರ್ದೇಶಕರು (ತಾಂ) ರವರುಗಳಿಗೆ.
11) ಭೂದಾಖಲೆಗಳ ಸಹಾಯಕ ನಿರ್ದೇಶಕರು (ಆ)
12) ಕೇಂದ್ರಕಛೇರಿಯ ಎಲ್ಲಾ ಶಾಖೆಗಳಿಗೆ.

ಆಯುಕ್ತರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು,ಬೆಂಗಳೂರು.

SSLR-circular
G